ಪಾಠ - ೧

# ಬಣ್ಣದ ಹಕ್ಕಿ (ಪದ್ಯ)



ಬಾರಲೆ ಹಕ್ಕಿ ಬಣ್ಣದ ಹಕ್ಕಿ
ಬಾರಲೆ ಹಕ್ಕಿ ಹಾರುವ ಹಕ್ಕಿ

ಗೆಳೆಯರು ಆಡಲು ಯಾರೂ ಇಲ್ಲ
ಕಳೆಯುವುದೆಂತು ವೇಳೆಯನೆಲ್ಲ
ಬಾ ಬಾ ನನಗೂ ಹಾಡಲು ಕಲಿಸು
ಬಾ ಬಾ ನನಗೂ ಹಾರಲು ಕಲಿಸು

ಅವ್ವನು ನೀರಿಗೆ ಹೋಗಿಹಳು
ಅಪ್ಪನು ಪೇಟೆಗೆ ಹೋಗಿಹನು
ಅವ್ವನು ಬರಲಿ ಅಪ್ಪನು ಬರಲಿ
ತಿನ್ನಲು ಹಣ್ಣನು ಕೊಡಿಸುವೆನು



ನನಗೂ ಎರಡು ರೆಕ್ಕೆಯ ಹಚ್ಚು
ಹಿಂಗಡೆ ಬಣ್ಣದ ಪುಚ್ಛವ ಚುಚ್ಚು
ನೆತ್ತಿಯ ಮೇಲೆ ಜುಟ್ಟನು ಹಚ್ಚು
ಮೆಲ್ಲನೆ ಮೇಲೆ ಹಾರಲು ಹಚ್ಚು

ನಾನು ನೀನೂ ಇಬ್ಬರು ಕೂಡಿ
ಮುಗಿಲಿನ ಕಡೆಗೆ ಹಾರುವ ಬಾ
ಅಲ್ಲಿಂದಿತ್ತ ಇಲ್ಲಿಂದತ್ತ
ಹಾರುತ ಹಾಡುತ ನಲಿಯುವ ಬಾ.

– ಸಿ. ಪ. ಕಟ್ಟೀಮನಿ